

ಪುಟ್ಟ ದೇಶ ಉಕ್ರೇನ್‌ನ ಮೇಲೆ ದೊಡ್ಡ ದೇಶ ರಷ್ಯಾ ಮುಗಿಬಿದ್ದಿದೆ. ಉಕ್ರೇನ್‌ನಲ್ಲೀಗ ಗುಂಡಿನ ಮೊರೆತ, ಬಾಂಬ್‌ಗಳ ಸಿಡಿತ, ನೆತ್ತರಿನ ಕಮಟು. ವಿಧ್ವಂಸಕ ದಾಳಿಯಿಂದಾಗಿ ನಾಗರಿಕ ಜಗತ್ತು ಛಿದ್ರ ಛಿದ್ರವಾಗುತ್ತಿದೆ. ಇದೆಲ್ಲವೂ ಮಾಧ್ಯಮ ವರದಿಗಳ ಮೂಲಕ ಹಾಗೂ ಮಾಧ್ಯಮಗಳು ಕಾಣಿಸಿದ ಬಿಂಬಗಳ ಮೂಲಕ ನಾವು ಕಟ್ಟಿಕೊಂಡಿರುವ ಯುದ್ಧದ ಚಿತ್ರ. ಯುದ್ಧಭೂಮಿಯ ಪ್ರತ್ಯಕ್ಷ ನೋಟದ ಅನುಭವವೇ ಬೇರೆ. ಅಂಥ ನೇರ ಕಣ್ಣೋಟದ ಅನುಭವ ಕನ್ನಡಿಗ **ಮಂಜುನಾಥ್ ಕಿರಣ್** ಅವರದು. 2013ರಲ್ಲಿ ಅಫ್ಗಾನಿಸ್ತಾನದಲ್ಲಿ ನಡೆದ ತಾಲಿಬಾನ್ ವಿರುದ್ಧದ ಕಾರ್ಯಾಚರಣೆಯನ್ನು ‘ಎಎಫ್‌ಪಿ’ ಫೋಟೋಜರ್ನಲಿಸ್ಟ್ ಆಗಿ ವರದಿ ಮಾಡುವ ಅಪೂರ್ವ ಅವಕಾಶ ಅವರದಾಗಿತ್ತು. ದಶಕಗಳ ಹಿಂದಿನ ಆ ಅನುಭವವನ್ನು ‘ಸುಧಾ’ ಓದುಗರಿಗಾಗಿ ಮಂಜುನಾಥ್ ನೆನಪಿಸಿಕೊಂಡಿದ್ದಾರೆ. ಈ ಅನುಭವ ಕಥನ ಯುದ್ಧದ ದಾರುಣತೆ ಹಾಗೂ ನಿರರ್ಥಕತೆಯನ್ನು ಸೂಚಿಸುವುದರ ಜೊತೆಗೆ, ರಷ್ಯಾ–ಉಕ್ರೇನ್ ಕದನದ ಭೀಕರ ಚಿತ್ರಗಳ ಅಂದಾಜಿಗೂ ಅವಕಾಶ ಕಲ್ಪಿಸುವಂತಿದೆ.

■ ನಿರೂಪಣೆ: **ರಾಘವೇಂದ್ರ ಕೆ. ತೊಗರ್ಸಿ**
ಚಿತ್ರಗಳು: ಮಂಜುನಾಥ್ ಕಿರಣ್/ಎಎಫ್‌ಪಿ



ಪೇಟೆಗೆ ಬಂದ ಶಸ್ತ್ರಸಜ್ಜಿತ ಅಮೆರಿಕದ ಸೈನಿಕರನ್ನು ಬೆದರುಗಣ್ಣಿನಿಂದ ನೋಡುವ ಮಕ್ಕಳು

ಅಫ್ಗನ್ ಸೇನೆ ಮತ್ತು ಅಮೆರಿಕ ಸೇನೆಯ ಗುರುತು






ವಿಶ್ರಾಂತಿಯ ಗಳಿಗೆ



ಗಾಯ ಮಾಡಿಕೊಂಡಿರುವ ಮಗುವಿಗೆ ಚಿಕಿತ್ಸೆ ನೀಡುತ್ತಿರುವ ಅಮೆರಿಕ ವೈದ್ಯರು